ಓ ಎಸ್ ನಂ.143/2015
ಡಿಡಬ್ಲ್ಯು. 1

ಇಂದು ದಿಃ 19.07.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ**

2 ಮತ್ತು 3 ನೇ ವಾದಿಗಳು ನನ್ನ ಖಾಸ ಅಕ್ಕಂದಿರು. ನನ್ನ ತಂದೆಗೆ ನಾನು, 2 ನೇ ಮತ್ತು 3 ನೇ ವಾದಿಗಳು ಮಕ್ಕಳು. ನನ್ನ ಅಜ್ಜ ಯಲ್ಲಪ್ಪರವರಿಗೆ 4 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು. ಈಗ 9-10 ವರ್ಷಗಳ ಹಿಂದೆ ಯಲ್ಲಪ್ಪ ರೀತಿಕೊಂಡರು. ಯಲ್ಲಪ್ಪನ ಮಕ್ಕಳಾದ ಮಲ್ಲವ್ವ, ಮಡಿವಾಳಪ್ಪ, ಶಂಕರಪ್ಪ,ಗಂಗವ್ವ ಮತ್ತು ರಾಯಪ್ಪ ತೀರಿಕೊಂಡಿದ್ದಾರೆ. ಮಡಿವಾಳಪ್ಪ, ಶಂಕರಪ್ಪ, ಶಿವಪ್ಪ ಮತ್ತು ರಾಯಪ್ಪರವರು ಅವರವರ ಸ್ವತ್ತುಗಳ ಕಬ್ಜಾದಲ್ಲಿ ಇದ್ದಾರೆ.

ಯಲ್ಲಪ್ಪರವರಿಗೆ ಮೂಲತಃ ಎಷ್ಟು ಎಕರೆ ಜಮೀನು ಇತ್ತು ಎಂದು ನನಗೆ ಹೇಳಲಾಗುವುದಿಲ್ಲ. 2 ನೇ ವಾದಿಯ ಮದುವೆಯಾದಾಗ ನಾನು 10-12 ವರ್ಷದವನಿದ್ದೆ. 2 ನೇ ವಾದಿಯ ಮಗಳನ್ನೇ ನಾನು ಮದುವೆಯಾಗಿದ್ದೇನೆ. 2 ನೇ ವಾದಿಯ ಮದುವೆಯಾಗುವಾಗ ನನ್ನ ತಂದೆ ಜೀವಂತ ಇದ್ದರು. 2 ನೇ ವಾದಿಯ ಮದುವೆ ಎಷ್ಟನೆ ಇಸ್ವಿಯಲ್ಲಿ ಆಯಿತು ಎಂದು ನನಗೆ ಹೇಳಲು ಆಗುವುದಿಲ್ಲ. 3 ನೇ ವಾದಿಯ ಮದುವೆಯಾದಾಗ ನನ್ನ ತಂದೆ ಜೀವಂತ ಇದ್ದರು. ಆ ಸಮಯದಲ್ಲಿ ನನಗೆ ಸಂಪೂರ್ಣ ತಿಳುವಳಿಕೆ ಇತ್ತು ಎಂದು ಹೇಳುವುದು ಸರಿಯಲ್ಲ.

ನನ್ನ ಅಜ್ಜ ಯಲ್ಲಪ್ಪ ಅವರ ಜೀವಿತ ಕಾಲದಲ್ಲಿ ತಮ್ಮ ಸ್ವತ್ತುಗಳನ್ನು ಮಡಿವಾಳಪ್ಪ, ಶಂಕರಪ್ಪ, ಶಿವಪ್ಪ ಮತ್ತು ರಾಯಪ್ಪರವರಿಗೆ ಪಾಲು ಮಾಡಿ ಕೊಟ್ಟಿದ್ದರು. ಆ ಸಮಯದಲ್ಲಿ ನನ್ನ ಅಜ್ಜ ಯಲ್ಲಪ್ಪ ಮತ್ತು ಅಜ್ಜಿ ತಂಗೆವ್ವರವರಿಗೆ ಅವರ ಜೀವನೋಪಾಯಕ್ಕಾಗಿ ಒಟ್ಟು 12 ಎಕರೆ ಜಮೀನ್ನನ್ನು ಅವರ ಹೆಸರಿನಲ್ಲಿ ಇಟ್ಟಿದ್ದರು. ಅವರು ತೀರಿ ಹೋದ ನಂತರ ಸದರಿ 12 ಎಕರೆ ಜಮೀನು ದಿನಾಂಕ 07.01.2005

ರಂದು ಸಬ್ ರಜಿಸ್ಟರ್ ಕಚೇರಿಯಲ್ಲಿ ನೋಂದಾಯಿತ ಪಾಲು ವಿಭಾಗ ಪತ್ರದ ಮೂಲಕ ಮಡಿವಾಳಪ್ಪ, ಶಂಕರಪ್ಪ, ಶಿವಪ್ಪ ಮತ್ತು ರಾಯಪ್ಪರವರ ಪಾಲಿಗೆ ಹೋಯಿತು.

ಈಗ ನನಗೆ ತೋರಿಸಿದ ನಿಡಿ–8 ಮತ್ತು ನಿಡಿ–9 ರಲ್ಲಿ ಸರ್ವೆ ನಂ.137 ಮಾತ್ರ ತೋರಿಸಲಾಗಿದೆ. ಅವುಗಳು ಸೃಷ್ಟಿಸಿದ ದಾಖಲೆಗಳಾಗಿವೆ ಎಂದು ಹೇಳುವುದು ಸರಿಯಲ್ಲ. 10–11 ವರ್ಷಗಳ ಹಿಂದೆ ಸರ್ವೆ ನಂ.137/3 ರಲ್ಲಿ ಕೃಷಿ ಹೊಂಡವನ್ನು ತೋರಿಸಿದ್ದೇನೆ. ಅದನ್ನು ತೋಡಿಸಲು ಗ್ರಾಮ ಪಂಚಾಯತಿಯವರು ಹಣ ಕೊಟ್ಟಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹಣವನ್ನು ಕೊಟ್ಟಲ್ಲ, ಅಕ್ಕಿಯನ್ನು ಕೊಟ್ಟಿದ್ದು ಅದನ್ನು ಕೃಷಿ ಹೊಂಡವನ್ನು ಕಡಿಯುವವರಿಗೆ ಕೊಟ್ಟಿದ್ದೇನ ಎಂದು ನುಡಿದಿರುತ್ತಾರೆ.

ನನ್ನ ತಂದೆ ತೀರಿಹೋದಾಗ ನಾನು 12 ವರ್ಷದವನಿದ್ದೆ. ನನ್ನ ಮದುವೆಯಾಗಿ ಸುಮಾರು 25 ವರ್ಷಗಳಾಗಿವೆ. ನಾನು 2 ನೇ ಪ್ರತಿವಾದಿ ವಿರುದ್ಧ ಕ್ರೀಮಿನಲ್ ಮೊಕ್ಕದ್ದಮೆ ದಾಖಲಿಸಿದ್ದೆ. ಅವರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದ್ದು ಅದು ನಿಡಿ–11 ಆಗಿದೆ. ದಾವಾ ಸರ್ವೆ ನಂ.137/3 ಕ್ಕೆ ಹೊಂದಿಕೊಂಡಂತೆ ಪೂರ್ವಕ್ಕೆ 2 ನೇ ಪ್ರತಿವಾದಿಗೆ ಸೇರಿದ ಜಮೀನು ಇದೆ. ಪಶ್ಚಿಮಕ್ಕೆ ಮಾಂತೇಶರವರ ಜಮೀನು ಇದೆ. ಉತ್ತರಕ್ಕೆ ಹಂಚಿನಾಳ ಗಂಗಪ್ಪರವರ ಜಮೀನು ಇದೆ ಮತ್ತು ದಕ್ಷಿಣಕ್ಕೆ ಈರಪ್ಪ ಅಂಬರಶೆಟ್ಟಿರವರ ಜಮೀನು ಇದೆ.

2 ನೇ ಪ್ರತಿವಾದಿ ಹೆಸರನಲ್ಲಿ ಕಂದಾಯ ದಾಖಲೆ ದಾಖಲಾಗಿರುವುದು ತಪ್ಪಾಗಿದೆ ಎಂದು ಪ್ರಶ್ನಿಸಿ ತಹಶೀಲ್ದಾರರವರ ಎದುರು ನಾನು ಮತ್ತು ನನ್ನ ಅಕ್ಕಂದಿರು ಸೇರಿ ಮೇಲ್ಮನವಿ ಸಲ್ಲಿಸಿದ್ದೆವು. ಅದರಲ್ಲಿ ನಮ್ಮ ವಿರುದ್ಧ ಆದೇಶ ಆಗಿದ್ದು, ಅದನ್ನು ಪ್ರಶ್ನಿಸಿ ಡಿಸಿರವರ ಎದುರು ನಾವು ಮತ್ತು ನನ್ನ ತಾಯಿ ಸೇರಿ ಮೇಲ್ಮನವಿ ಸಲ್ಲಿಸಿದ್ದೆವು. ಅದು ವಜಾ ಆಯಿತು. ಸಾಕ್ಷಿ ಸ್ವತಃ ಹೇಳುತ್ತಾರೆ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಅದೇಶ ಆಯಿತು ಎಂದು. ಡಿಸಿಯವರ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುವುದಿಲ್ಲ.

ನಿಡಿ–13 ಫೋಟೋಗಳು ಸರ್ವೆ ನಂ.137/3 ಸ್ವತ್ತಿಗೆ ಸಂಬಂಧಪಟ್ಟಿದ್ದವುಗಳು. ದಾವಾ ಸ್ವತ್ತುಗಳಲ್ಲಿ ತಮಗೆ ಪಾಲು ಬೇಕು ಎಂದು ನನ್ನ ಅಕ್ಕಂದಿರು ಈ ದಾವೆಯನ್ನು ಸಲ್ಲಿಸಿದ್ದಾರೆ. ನನ್ನ ಅಜ್ಜ ತೀರಿಹೋದ ನಂತರ ನೋಂದಾಯಿತ ಪಾಲು ಮಾಡಿಕೊಳ್ಳುವ ಸಮಯದಲ್ಲಿ ಸರ್ವೆ ನಂ.137/3 ಸ್ವತ್ತು 2 ನೇ ಪ್ರತಿವಾದಿ ಹೆಸರಿನಲ್ಲಿ ದಾಖಲಾಗಿತ್ತು ಎಂದು ಹೇಳುವುದು ಸರಿಯಲ್ಲ. ನನ್ನ ತಂದೆ ಬೇರೆ ಆದ ನಂತರ ಅವರ ಆರ್ಥಿಕ ಪರೀಸ್ಥಿತಿ ಚೆನ್ನಾಗಿರಲ್ಲಿಲ್ಲ ಎಂದು ಹೇಳುವುದು ಸರಿಯಲ್ಲ. ನನ್ನ ತಂದೆಗೆ ಕುಡಿತದ ಅಬ್ಯಾಸ ಇತ್ತು. ಅವರು ಸಾಲ ಮಾಡಿಕೊಂಡಿದ್ದರು ಎಂದು ಹೇಳುವುದು ಸರಿಯಿಲ್ಲ.

2 ನೇ ವಾದಿಯ ಮದುವೆಯ ಖರ್ಚಿಗಾಗಿ ಹಾಗೂ ಸಾಲವನ್ನು ತೀರಿಸುವುದಕ್ಕಾಗಿ ನನ್ನ ತಂದೆ 2 ನೇ ಪ್ರತಿವಾದಿಗೆ ಹೊಲವನ್ನು ಮಾರಾಟ ಮಾಡಿದ್ದರು ಎಂದು ಹೇಳುವುದು ಸರಿಯಲ್ಲ. ತಮಗೆ ಪಾಲು ಬೇಕು ಎಂದು ಕೇಳಿ ನನ್ನ ಅಕ್ಕಂದಿರು ಹಿರಿಯರನ್ನು ಕೂಡಿಸಿದ್ದರು. ಆ ಸಮಯದಲ್ಲಿ 2 ನೇ ಪ್ರತಿವಾದಿ ತನಗೆ ಮಾರಾಟ ಮಾಡಿದ ಸ್ವತ್ತನ್ನು ಬಿಟ್ಟು ಉಳಿದ ಸ್ವತ್ತನ್ನು ಪಾಲು ಮಾಡಿಕೊಳ್ಳಿ ಎಂದು ಹೇಳಿದರು.

**ಈ ಹಂತದಲ್ಲಿ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ವೇಳೆ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾಹಾಗೂ ಸಿಜೆಎಂ,
ಧಾರವಾಡ.